(SRI S. NIJALINGAPPA)

whether any more officers would be required.

ಶ್ರೀ ಎಚ್. ಜಿ. ನರಸಿಂಹೇಗೌಡ.—ಸರ್ಕಾರದವರು ಒಂದು ಸಾರಿ ಅಡ್ವರ್ಟೈಸ್ ಮಾಡಿದ ಮೇಲೆ ಅದಕ್ಕೆ ಸಂಬಂಧಪಟ್ಟ ನಿಯಮಗಳನ್ನು ಅನುಸರಿಸ ಬೇಕಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ನಿಯಮದ ವಿಚಾರ ವಲ್ಲ. ಅದು ಸರ್ಕಾರದ ಅನುಕೂಲತೆ, ಅನಾನು ಕೂಲತೆಗಳನ್ನು ಅನುಸರಿಸುತ್ತದೆ.

Dr. A. R. KARISIDDAPPA.—May I know the number of Medical Probationers taken in 1956 ?

Mr. SPEAKER.—It is out-side the scope of the main question.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈಗ ಇರುವ ಪ್ರೊಬೇಷನರುಗಳ ಪಟ್ಟಿಯನ್ನು ಉಳಿಸಿ ಕೊಂಡಿದ್ದೀರೋ ಅಥವಾ ಸ್ಕ್ರ್ಯಾಪ್ ಮಾಡಿ ದ್ದೀರೋ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರೊಬೇಷನರುಗಳ ಪಟ್ಟಿ ಯಾವಾಗಲೂ ಜೀವಂತವಾಗಿಯೇ ಇರುತ್ತದೆ. ಅದು ಇನ್ನೂ ಹೆಚ್ಚು ಬೆಳೆಯುತ್ತಾ ಇರುತ್ತದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—18 ರಾಗಾದರೆ ಖಾಲಿ ಸ್ಥಾನಗಳನ್ನು ಭರ್ತಿಮಾಡದೆ ಉಳಿದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಹೇಳುವುದಕ್ಕಾ ಗುವುದಿಲ್ಲ. ಅದು ಹಳೆಯ ಮೈಸೂರಿಗೆ ಸಂಬಂಧ ಪಟ್ಟುದು.

ಶ್ರೀ ಜಿ. ಶಿವಪ್ಪ.—ಪ್ರೊಬೇಷನರುಗಳ ಅರ್ಜಿ ಗಳನ್ನು ಮಾರಿ ದುಡ್ಡು ತೆಗೆದುಕೊಂಡದ್ದು ನಿಜವೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ನನಗೆ ತಿಳಿಯದು.

ಶ್ರೀ ಜಿ. ಶಿವಪ್ಪ.—ಆ ಬಾಬಿನಿಂದ ಲಕ್ಷಾಂತರ ರೂಪಾಯಿಗಳು ಉತ್ಪತ್ತಿ ಬಂದಿರುವುದು ತಮಗೆ ಗೊತ್ತಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಲಕ್ಷಾಂತರ ರೂಪಾಯಿ ಗಳೇನೂ ಬಂದಿಲ್ಲ. ಅದನ್ನು ವಿಚಾರ ಮಾಡಬೇಕು.

Sri G. SIVAPPA.—I know definitely that each candidate had to pay more than 30 rupees.

Sri S. NIJALINGAPPA.—I am not aware, Sir.

ಶ್ರೀ ಎಚ್. ಕೆ. ಸಿದ್ದಯ್ಯ.—ಪ್ರೊಬೇಷನರು ಗಳನ್ನು ನೇಮಕಮಾಡುವ ವಿಚಾರವನ್ನು ಬಿಟ್ಟುಬಿಡ ಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಹಾಗಾ ದರೆ ಇನ್ನು ಮುಂದೆ ಅವರನ್ನು ತೆಗೆದುಕೊಳ್ಳುವು ದಿಲ್ಲವೆಂದು ಅರ್ಥವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅರ್ಥ ಹಾಗಾಗು ವುದಿಲ್ಲ.

ಶ್ರೀ ಎ. ಆರ್. ಪಂಚಗವಿ.—ಹೊಸ ಮೈಸೂರು ರಾಜ್ಯ ಸ್ಥಾಪನೆಯಾದ ಮೇಲೆ ಮೊದಲು ತಯಾರಿಸಿದ ಪ್ರೊಬೇಷನರುಗಳ ಪಟ್ಟಿಯನ್ನು ರಿವೈಸ್ ಮಾಡಿ ದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅವಶ್ಯಕತೆ ಇದ್ದರೆ ಪುನಃ ಅರ್ಜಿಗಳನ್ನು ಕಾರ್‌ಫಾರ್ ಮಾಡಿ ತೀರ್ಮಾನ ಮಾಡಬೇಕು.

Sri A. R. BADRI NARAYAN.—Is there any need for probationers at the present moment, Sir ?

Sri S. NIJALINGAPPA.—Well, that question is being examined.

Sri A. R. BADRI NARAYAN.—Are there any more vacancies ?

Sri S. NIJALINGAPPA.—None that I see just now.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹೊಸದಾಗಿ ಪ್ರೊಬೇಷನರುಗಳನ್ನು ತೆಗೆದುಕೊಳ್ಳುವಾಗ ಹಿಂದಿನ ಪ್ರೊಬೇಷನರುಗಳ ಪಟ್ಟಿಯಲ್ಲಿರುವವರು ಮುಂದು ವರಿಯುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಪುನಃ ಅರ್ಜಿಗಳನ್ನು ಕಾರ್‌ಫಾರ್ ಮಾಡಿದಾಗ ಅವರೂ ಹಾಕಿಕೊಳ್ಳು ತ್ತಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹಿಂದಿನ ಅರ್ಜಿ ದಾರರು ಹೊಸದಾಗಿ ಅಡ್ವರ್ಟೈಸ್ ಮಾಡಿದಾಗ ಹೊಸಬರೊಡನೆ ಅವರು ಸೇರಿಕೊಳ್ಳುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ. ಹೊಸದಾಗಿ ಅರ್ಜಿಗಳನ್ನು ಕಾರ್‌ಫಾರ್ ಮಾಡಿದಾಗ ಎಲ್ಲರೂ ಅರ್ಜಿಗಳನ್ನು ಹಾಕಲೇಬೇಕು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಹಾಗಾದರೆ ಈ ವಿಷಯದಲ್ಲಿ ಸರ್ಕಾರದವರು ತಪ್ಪು ಮಾಡಿದಂತಾ ಗುವುದಿಲ್ಲವೇ ?

Mr. SPEAKER.—That is a matter of opinion.

Sri G. VENKATAI GOWDA.—Will the Government consider the necessity of giving concession to those persons who are barred by age-limit because they were not taken at that time ?

Sri S. NIJALINGAPPA.—That is a suggestion, perhaps.

ಶ್ರೀ ಟಿ. ತಾರೇಗೌಡ.—ಹಳೆಯ ಮೈಸೂರಿನಲ್ಲಿದ್ದ ವಯಸ್ಸಿನ ಮಿತಿಯ ಬದಲಾವಣೆಯಿಂದ ಅರ್ಜಿದಾರ ರಿಗೆ ಬಹಳ ತೊಂದರೆಯಾಗುತ್ತಿದೆ ಎಂಬುದು ತಮಗೆ ಗೊತ್ತಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ತೊಂದರೆಯಾಗಿದೆ ಎಂದು ಹೇಳುವುದು ಒಂದು ಅಭಿಪ್ರಾಯದ ಮಾತು.

ಶ್ರೀ ಟಿ. ತಾರೇಗೌಡ.—ಆದಷ್ಟು ಜಾಗ್ರತೆ ಪ್ರೊಬೇಷನರುಗಳನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆಂದು ಹೇಳಲಿಲ್ಲ.

ಶ್ರೀ ಟಿ. ತಾರೇಗೌಡ.—ಹಾಗಾದರೆ ಯಾವಾಗ ಇವರನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿ ದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆವಶ್ಯಕತೆ ಬಿದ್ದಾಗ ವಯಸ್ಸಿನ ದೃಷ್ಟಿಗನುಸಾರವಾಗಿರತಕ್ಕ ಅರ್ಜಿದಾರ ರನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಟಿ. ತಾರೇಗೌಡ.—ಒಂದು ಸಾರಿ ದುಡ್ಡು ಕಟ್ಟಿ ಅರ್ಜಿ ಹಾಕಿದ ಮೇಲೆ, ಪುನಃ ಇನ್ನೊಂದು ಸಾರಿ ಅರ್ಜಿ ಹಾಕುವುದರಿಂದ ಅವರಿಗೆ ದುಡ್ಡು ವಿಶೇಷವಾಗಿ ವ್ಯಯವಾಗುತ್ತದೆಯಲ್ಲವೇ ?

ಅಧ್ಯಕ್ಷರು.—ಅದು ಅಭಿಪ್ರಾಯದ ಮಾತು.

Scheduled Caste and Scheduled Tribe families in Bangalore District and facilities provided to them.

Q.—52. Sri S. KARIYAPPA (Virupakshipura).—

Will the Government be pleased to state :—

(*a*) the number of Scheduled Caste and Scheduled Tribe families in Bangalore District ;

(*b*) the number of families provided with—

(*i*) house building materials ;

(*ii*) cows or bullocks ;

(*iii*) weaving equipment ;

(*iv*) cobblery raw materials ;

(*v*) other industrial and agricultural aid ?

(Talukwise and yearwise figures for the last three years may be furnished).

A.—Sri R. CHENNIGARAMAIAH (Minister for Local Self-Government).—

(*a*) Scheduled Castes : 49,315. Scheduled Tribe : 470.

(*b*) *Vide* Statement appended.

(SRI R. CHENNIGARAMAIAH)

STATEMENT

Sl. No.	Taluks	Scheduled Castes													Scheduled Tribes					
		House Building Materials			Cows or Bullocks			Weaving equipments	Cobblery raw materials			Other Ind. and Agricultural Aid			House Building materials			Other Ind. and Agricultural Aid		
		1954-55	1955-56	1956-57	1954-55	1955-56	1956-57	...	1954-55	1955-56	1956-57	1954-55	1955-56	1956-57	1954-55	1955-56	1956-57	1954-55	1955-56	1956-57
1	2	3	4	5	6	7	8	9	10	11	12	13	14	15	16	17	18	19	20	21
1	Nelamangala ...	63	59	58	12	8	62	...	...	...	...	8	1	20	...	...	...	...	...	...
2	Doddaballapur ...	56	24	46	4	6	36	...	...	...	...	2	1	15	...	...	...	...	...	...
3	Devanahalli ...	53	43	37	3	15	31	...	...	...	...	2	2	8	...	...	...	...	...	...
4	Hosakote ...	80	35	29	6	6	40	...	...	2	1	5	4	18	...	...	...	...	...	...
5	Anekal ...	54	43	88	3	14	41	...	...	...	...	3	1	14	...	...	6	...	...	...
6	Kanakapura ...	30	85	53	5	4	51	...	...	...	...	13	4	16	20	15	11	8	7	14
7	Channapatna ...	32	30	40	2	5	56	...	...	...	1	6	1	10	...	...	...	5	12	7
8	Ramanagaram ...	70	39	65	3	8	22	...	...	...	...	2	1	13	9	16	11	...	...	..
9	Magadi ...	65	29	60	6	13	61	...	2	2	1	10	4	31	5	9	4	5	12	8
10	Bangalore North ...	60	68	69	6	8	55	...	...	...	...	13	...	23	...	...	...	...	...	...
11	Bangalore South ...	4	76	57	6	...	56	...	...	2	1	4	17	24		...	...	...	...	...
	Total ...	567	541	599	56	95	511	...	2	6	4	68	36	192	34	40	32	18	31	29

ಶ್ರೀ ಎಸ್. ಕರಿಯಪ್ಪ.—ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನಗಳಿಗೆ ಕೊಡಬೇಕಾದ ಸಹಾಯವನ್ನು ಇನ್ನೆಷ್ಟು ವರ್ಷಗಳ ಕಾಲ ಒದಗಿಸಿಕೊಡುತ್ತೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಎಷ್ಟು ವರ್ಷಗಳ ಕಾಲ ಈ ಸಭೆಯವರು ಅನುಮತಿ ಕೊಡುತ್ತಾರೋ ಅಷ್ಟು ವರ್ಷಗಳ ಕಾಲ ಒದಗಿಸಿಕೊಡಲಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಇವರಿಗೆ ಒದಗಿರುವ ಅನುಕೂಲಗಳಲ್ಲಿ ಕೆಲವು ಕಡೆ ಜಾಸ್ತಿ, ಮತ್ತೆ ಕೆಲವು ಕಡೆ ಕಡಮೆ, ಹೀಗೆ ಹೆಚ್ಚುಕಡಮೆ ಸಹಾಯ ಆಗಿರುವುದಕ್ಕೆ ಕಾರಣವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕಾರಣ, ಆಯಾ ತಾಲ್ಲೂಕಿನ ಪಾಪುಲೇಷನ್ ಮೇಲೆ ಇದು ಅವಲಂಬಿಸುತ್ತದೆ. ಅವರು ಮುಂದೆ ಬಂದು ತೆಗೆದುಕೊಳ್ಳದೆ ಇರಬಹುದು. ಹೀಗೆ ನಾನಾ ಕಾರಣಗಳಿವೆ.

ಶ್ರೀ ಶಂಕರಗೌಡ ಅಳವಂಡಿ.—ಅನುಸೂಚಿತ ಪಂಗಡಗಳು ಎಂದರೆ ಯಾವಯಾವ ಜಾತಿಗಳು ಬರುತ್ತವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದಕ್ಕೆ ಒಂದು ದೊಡ್ಡ ಪಟ್ಟಿಯೇ ಇದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪ್ರಶ್ನೆಯ (a) ಭಾಗಕ್ಕೆ ಉತ್ತರವಾಗಿ ಅನುಸೂಚಿತ ಜಾತಿಗಳು 49,315 ಎಂದು ಹೇಳಿದೆ. ಅಷ್ಟೊಂದು ಜಾತಿಗಳು ಇವೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇರುವುದಕ್ಕೇ ಕೊಟ್ಟಿರುವುದು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಾಗಾದರೆ 49,315 ಜಾತಿಗಳೋ ಅಥವಾ ಸಂಸಾರಗಳೋ ?

ಶ್ರೀ ಸಿ. ಎಂ. ಪೂಣಚ್ಚ.—ಪ್ರಶ್ನೆ ಮತ್ತು ಉತ್ತರವನ್ನು ಇನ್ನೊಂದು ಸಾರಿ ಓದಿದರೆ ಚೆನ್ನಾಗಿ ತಿಳಿಯುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅವು ಸಂಸಾರಗಳು, ಜಾತಿಗಳಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಾಗಾದರೆ 49,315 ಸಂಸಾರಗಳು ಎಂದು ಅಚ್ಚು ಆಗಬೇಕಾಗಿತ್ತಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

Construction of the Bridge at Ambalnur.

Q.—87. **Sri SANKAR GOUDA Y. PATIL** (Sindgi).—

Will the Government be pleased to state :—

(*a*) whether they are aware that due to overflowing of Ambalnur Nala on Devarahippargi-Talikoti Road during rainy season the way is closed for traffic for three months ;

(*b*) whether they propose to take immediate steps to construct a bridge across the nala ?

A.—**Sri R. CHENNIGARAMAIAH** (Minister for Local Self-Government).—

(*a*) Yes ; the traffic is interrupted for some days.

(*b*) This will be considered.

ಶ್ರೀ ಶಂಕರಗೌಡ ವೈ. ಪಾಟೀಲ್.—ತಾಳಿಕೋಟಿ ವ್ಯಾಪಾರ ಸ್ಥಳವಾಗಿದೆ ಎನ್ನುವುದು ಗೊತ್ತಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ವ್ಯಾಪಾರ ಸ್ಥಳವಾಗಿದೆ.

ಶ್ರೀ ಶಂಕರಗೌಡ ವೈ. ಪಾಟೀಲ್‌ರು.—ಈ ನಾಲೆಗೆ ಸೇತುವೆ ಪ್ಲಾನು ಎಸ್ಟಿಮೇಟ್ ತಯಾರಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಯಾರಾಗಿಲ್ಲ. ಅದನ್ನು ಕನ್‌ಸಿಡರ್ ಮಾಡುತ್ತೇವೆ.

ಶ್ರೀ ಶಂಕರಗೌಡ ವೈ. ಪಾಟೀಲ್.—ಸೇತುವೆ ಕಟ್ಟುವುದು ಅವಶ್ಯಕ ಎನ್ನುವ ಬಗ್ಗೆ ಮುಂಬೈ ರಾಜ್ಯಕ್ಕೆ ಸೇರಿದ್ದಾಗ ಬಹಳ ಜನಗಳು ತಕರಾರು ನಡೆಯಿಸಿರುವುದು ಗೊತ್ತಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದೇನೂ ಗೊತ್ತಿಲ್ಲ.

Photographs of Mahatma Gandhi or President of India in the Court Hall of the High Court.

Q.—129. **Sri H. V. KOUJALGI** (Sampagaon I).—

Will the Government be pleased to state :—

(*a*) whether they are aware that the photographs of the President of the Republic of India or of Mahatma Gandhi are not hung in the Court Halls of the High Court ;

(*b*) whether it is a fact that only the photographs of the ex-Maharaja of Mysore are hung there ;

(*c*) whether there is any rule that the photographs of the President or Mahatma Gandhi should be hung in the Court Hall ?

A.—**Sri S. NIJALINGAPPA** (Chief Minister).—

(*a*) Yes.
(*b*) No.
(*c*) No.

Sri H. V. KOUJALGI.—With reference to answer (c) may I know at least whether there is any direction from the Centre to this effect ?

Sri S. NIJALINGAPPA.—No, Sir.